ಆಯ್ತು ಮಾತಾಡಿ...' (ಪರ್ಸನಲ್ ವಿಷಯಕ್ಕೆಲ್ಲ ಇದು ಸ್ಥಳವೂ ಅಲ್ಲ... ಸಮಯವೂ ಅಲ್ಲ – ಎನ್ನಲಾದೀತೆ?)

'ಯಾರತ್ರಾದ್ರು ಹೇಳ್ಕೋಬೇಕು ಅಂತಿದ್ದೇ ನಾನು... ನನ್ನ ಮಿಸೆಸ್‌ಗೂ ಗೊತ್ತಿಲ್ಲ ಇದು... ನಾನು...'

ಆಗಲೇ ಪಸೆ ಪಸೆ ಸ್ವರ... ಧ್ವನಿ ಗದ್ಗದ... ಕಣ್ಣಿಗೆ ಸಜಲವಾಗುತ್ತಿತ್ತು...

'ಸರ್... ಇವತ್ತು ನಾನು ಕೆಲಸಕ್ಕೆ ರಿಸೈನ್ ಮಾಡಿ ಅಲ್ಲಿಂದಲೇ ಬರ್‍ತಿದ್ದೇನೆ... ನಮ್ದು ಬಟಾಟೆ ಹೋಲ್‌ಸೇಲ್ ಬಿಸಿನೆಸ್.... ತುಂಬಾ ಲಾಸ್ ಆಗಿತ್ತು. ಅದ್ಕೆಲ್ಲಾ ನಾನೇ ಕಾರಣ ಅಂತ ಉಳಿದವ್ರ ಆರೋಪ... ದಗಲ್ಬಾಜಿಗಳು ಅವರೆಲ್ಲ ...ಆರೋಪ ನನ್ಮೇಲೆ ... ಇವತ್ತು ಜೋರಾಯ್ತು... ತುಂಬಾ ಬೇಜಾರಾಗಿ ರಿಸೈನ್ ಬರ್‍ದು ಕೊಟ್ಟು ಬಂದಾಯ್ತು. ಇನ್ನು ಅವ್ರು ಅಪಪ್ರಚಾರ ಹೊತ್ಕೊಂಡು ಕೆಲ್ಸಾನೂ ಇಲ್ದೆ?... ಬದುಕೇ ಸಾಕಾಯ್ತು ನನ್ಗೆ...'

ತಟ್ಟನೆ ಅಬ್ದುಲ್ಲಾರ ಭಂಗಿ ಬದಲಾಯ್ತು. ಬಾಗಿ ಮೇಜಿಗೆ ತಲೆಯಾಡಿಸಿ ಬಿಕ್ಕತೊಡಗಿದರು... ಆನಂದರಿಗೆ ಕಕ್ಕಾಬಿಕ್ಕಿ... ಹಿನ್ನೆಲೆ ಮುನ್ನಲೆ ತಿಳಿಯದ ಆಚಾರ... ನೂರಾರು ಸಾಗರದಲೆಗಳು ಒಮ್ಮೆಲೇ ಉಕ್ಕೇರಿದಂತೆ... ತಲೆ ಧಿಮಿ ಧಿಮಿ ಅನ್ನತೊಡಗಿತು...

'ಹೌದಾ? ಹೀಗಾಗಬಾರ್‍ದಿತ್ತು... ಅನ್ನಲಿಕ್ಕಷ್ಟೇ ತೋಚಿದ್ದು ಆ ಕ್ಷಣಕ್ಕೆ ಎರಡೇ ನಿಮಿಷದಲ್ಲಿ ತಟ್ಟನೆ ನೇರ ಕುಳಿತರು ಅಬ್ದುಲ್ಲಾ...

ದುಃಖದಲ್ಲಿ ಪೂರ್ತಿ ನೆಂದವರಿಗೆ ಸಾಂತ್ವನದ ಬೆಚ್ಚನೆ ಹಚ್ಚಡ ಹೊದಿಸಲೇ ಬೇಕಾಗಿತ್ತಲ್ಲ. ಕೇಳುತ್ತಿದ್ದವರೂ? ತಕ್ಷಣದ ಕರ್ತವ್ಯ ಭಾರವದು.

'ನೋಡಿ ಅಬ್ದುಲ್ಲಾ ಅವರೆ... ಇಷ್ಟೆಲ್ಲಾ ನನ್ಗೆ ಗೊತ್ತಿರ್‍ಲಿಲ್ಲ. ನೀವೀಗ ಮಿಥ್ಯ ಆರೋಪ, ಸುಳ್ಳು ಅಪರಾಧಗಳಿಗೆಲ್ಲ ಹೆದರಿ ಕೂತ್ರೆ ಹೇಗೆ? ನಮ್ಗೂ, ಆ ದೇವರಿಗೂ ಸತ್ಯ ಗೊತ್ತಿದೆ ಅಲ್ವಾ?...'

'ಹೌದು... ಆದ್ರೇ...'

'ನೋಡಿ... ನಮ್ಮಲ್ಲಿ ಕೃಷ್ಣದೇವ್ರಿಗೂ ಕಳ್ಳ ಅಂತ ಆರೋಪ ಬಂದಿತ್ತು. ವಿಘ್ನ ನಿವಾರಕ ಗಣೇಶನೂ ಲೇವಡಿ ಎದುರಿಸ್ಬೇಕಾಯ್ತು. ಪತಿವ್ರತೆ ಸೀತೆಗೂ ಅಪವಾದ ತಪ್ಪಲಿಲ್ಲ. ನಿಮ್ಗೆ ಇವೆಲ್ಲ ಕೇಳಿ ಗೊತ್ತಿರ್‍ಬೇಕಲ್ಲಾ... ಅಪವಾದ, ಆರೋಪ ಎಲ್ಲಾ ಮರ್ತು ಬಿಡಿ, ಧೈರ್ಯವಾಗಿರಿ... ಹೆಂಡತಿ, ಮಕ್ಕಳ ಗತಿ ಎಣಿಸಿಕೊಳ್ಳಿ. ನೀವು ನಿಮ್ಮ ಸಮಸ್ಯೆಗೆ ಇತಿಶ್ರೀ ಹಾಕಲು ಜೀವ ಕಳ್ಕೊಂಡು, ಅವರನ್ನು ಸಮಸ್ಯೆಯ ಕೂಪಕ್ಕೆ ತಳ್ಳುವುದು ಎಷ್ಟು ಸರಿ? ಭಯ ಯಾಕೆ? ಬೇರೆ ಕೆಲ್ಸಕ್ಕೆ ಟ್ರೈಮಾಡಿ... ಅದೊಂದೇ ದಾರಿ ನಿಮ್ಗೆ... ನಾನೂ ಟ್ರೈಮಾಡ್ತೀನೆ... ಆಗದಾ?

ಸಾಂತ್ವನ ಹಿಡಿದೆದ್ದ ಆನಂದರು ದೈನ್ಯೇಸಿ ಅಬ್ದುಲ್ಲರ ಪಕ್ಕ ಬಂದರು. ಮೆಲುವಾಗಿ ಅವರ ಬೆನ್ನು ನೇವರಿಸಿದರು...

ಕರವಸ್ತ್ರದಿಂದ ಮುಖ ಒರೆಸುತ್ತ ಕಣ್ಣೀರಿನೊಂದಿಗೆ ಧೈನ್ಯಸ್ಥಿತಿಯನ್ನೂ ನಿಯಂತ್ರಿಸಿಕೊಂಡಂತೆ ಅಬ್ದುಲ್ಲಾ ನಿಧಾನಕ್ಕೆ ಗೆಲುವಾದರು.

'ಆಯ್ತು ಸಾರ್... ಹಾಗೇ ಮಾಡ್ತೇನೆ... ಬರ್ತೇನೆ... ಥ್ಯಾಂಕ್ಸ್ ತೊಂದ್ರೆ ಕೊಟ್ಟಿದ್ದಕ್ಕೆ ಸಾರಿ...'

ಜೋಡುಕೈಯೊಂದಿಗೆ ತಟ್ಟನೆ ನಿರ್ಗಮಿಸಿದ್ದೂ ಆಯ್ತು.

'ಛೇ ... ಛೇ... ಕರಾಳಭವಿಷ್ಯದ ಮುಂದೆ ಆರಡಿಯ ದೇಹವೊಂದು ಮೂರಡಿಗೆ ಕುಗ್ಗಿದ ಜಾದೂಗಾರಿಕೆಯೆ!...'

*****

ಇದೇ ಪ್ರಸಂಗ ಮತ್ತೆ ಕವಲೊಡೆದಿತ್ತು. ಸುಮುಖವಾಗಿ... ಸುಮಾರು ಹದಿನೈದು ದಿನಗಳ ಬಳಿಕ... ಅದೊಂದು ದಿನ ಬೆಳಿಗ್ಗೆ ಕಾಲೇಜಿನ ದೂರವಾಣಿ ರಿಂಗಣಿಸಿತ್ತು. ಅಬ್ದುಲ್ಲಾರ ಕರೆ ... ಹರ್ಷ ಉಕ್ಕುವ ಧ್ವನಿಯಲ್ಲಿ.

'ಸರ್... ನಾನು ಅಬ್ದುಲ್ಲಾ... ನಮಸ್ಕಾರ. ಹೊಸ ಜಾಬ್‌ಗೆ ಜಾಯಿನ್ ಆಗಿದ್ದೇನೆ... ಮೂರು ದಿನ ಆಯ್ತು. ನಿಮ್ಗೆ ಹೇಳ್ವಾ ಅಂತ ಕಾಲ್ ಮಾಡಿದೆ...'

'ಹೌದಾ? ಒಳ್ಳೇದಾಯ್ತು... ಆಲ್ ದಿ ಬೆಸ್ಟ್...'

'ಥ್ಯಾಂಕ್ಯೂ ಸರ್.... ಮತ್ತೆ ಸಿಕ್ತೇನೆ...'

'ಓಕೆ...'

...ನಮ್ಮ ಮುಗ್ಧ ಹುಡಗಿ ಮುಮ್ತಾಜಳ ತಂದೆಗೂ ಅದೇ ನೇರ ಸ್ವಭಾವ... ಇರ್‍ಲಿ... ಎಲ್ಲ ಒಳ್ಳೇದಾಯ್ತಲ್ಲ...'

ಎರಡು ತಿಂಗಳ ಬಳಿಕ ಮಗದೊಂದು ತಿರುವು... ಹರ್ಷದ ಹಾದಿಯಲ್ಲಿ ಅಬ್ದುಲ್ಲಾ... ಹಿಗ್ಗಿನ ಆವರಣವಿತ್ತು ಅದಕ್ಕೆ ಆ ದಿನ ಸಂಜೆ ಮತ್ತೆ ಭೇಟಿ ನೀಡಿದ್ದರು ಅಬ್ದುಲ್ಲರು ಖುಷಿ ಖುಷಿಯಾಗಿದ್ದ ಅವರ ಕೈಯಲ್ಲೊಂದು ಕಟ್ಟು ಯಾವುದೇ ಅಳುಕಿಲ್ಲ. ಈ ಬಾರಿ ಹಮ್ಮು ಬಿಮ್ಮಿನ ಭಂಗಿಯಂತೂ ಇಲ್ಲವೇ ಇಲ್ಲ. ನೇರ ನಡೆಯ ಧೀರ ನಾಯಕ ಅವರು.

'ನಮಸ್ಕಾರ ಸರ್... ನನ್ನದೊಂದು ಸಣ್ಣ ಗಿಫ್ಟ್ ನಿಮ್ಗೆ... ನನ್ನ ಹೊಸ ಕೆಲಸದ ಖುಷಿಗೆ.... ಪ್ಲೀಸ್ ಬೇಡ ಅಂತ ಮಾತ್ರ ಹೇಳ್ಬಾರ್ದು...'

ಕಟ್ಟನ್ನು ತಟ್ಟನೆ ಟೇಬಲ್ ಮೇಲಿಟ್ಟವರು 'ಇನ್ನೊಮ್ಮೆ ಸಿಕ್ತೇನೆ...' ಅನ್ನುತ್ತ ಬೆನ್ನು ತಿರುಗಿಸಿದರು.

ಪ್ರಾಚಾರ್ಯ ಆನಂದರಿಗೆ ತಬ್ಬಿಬ್ಬು!

'ಛೇ... ಖಂಡಿತ ಬೇಡ... ಇಂಥದ್ದೆಲ್ಲ ನಾನು ತೆಕ್ಕೊಳ್ಳುದೇ ಇಲ್ಲ... ಪ್ಲೀಸ್ ವಾಪಸ್ ಕೊಂಡ್ಹೋಗಿ...'

ಹಿಂತಿರುಗಿದ ಅಬ್ದುಲ್ಲರು ಕಿರುನಗು ಬೆಳೆಸಿಕೊಂಡಿದ್ದರು. ಒಂದು ಬಗೆದು ದೃಢತನದೊಂದಿಗೆ ಮತ್ತೆ ಬೇಡಿಕೊಂಡರು...'

'ಸರ್... ಇದು ನನ್ನ ಪರ್ಸನಲ್ ಗಿಫ್ಟ್ ನಿಮ್ಗೆ... ಈ ತಿಂಗಳ ಎಂಡಿಗೆ ರಿಟೇಯರ್ ಆಗ್ತೀರಲ್ಲ... ನನ್ನ ಸ್ಮರಣಿಕೆ ಅಂತ ತಿಳ್ಕೊಳ್ಳಿ... ಪ್ರೀತಿಯ ಕಾಣಿಕೆ ರಿಜೆಕ್ಟ್ ಮಾಡ್ಬೇಡಿ... ಪ್ಲೀಸ್... ಆಮೇಲೂ ಫೋನ್ ಮಾಡ್ತಾ ಇರುವಾ...'

ಸ್ಪಷ್ಟ ಸೂಚನೆ ನೀಡುತ್ತಲೇ ಬಂದ ಸುಂಟರಗಾಳಿ ನಿರ್ಗಮಿಸಿತ್ತು... ಆನಂದರ ಮನೋಮಂಡಲದಲ್ಲಿ ನೂರೆಂಟು ತರಂಗ ಮೂಡಿಸುತ್ತ...

*****

ಆ ಪ್ಯಾಕ್ ಅಂದೇ ಆನಂದರ ಮನೆ ಸೇರಿತ್ತು. ಕಡುವಿಶ್ವಾಸ, ಸ್ನೇಹಗಳ ದಾಖಲೆ ಎಂಬಂತೆ ನಿಸರ್ಗ ರಮಣೀಯತೆಯ ಆ ವಾಲ್ ಪ್ಲೇಟ್ ಅದರ ನಡುಮನೆಯ ಗೋಡೆಯ ನಡುಭಾಗದಲ್ಲಿ ವಿರಾಜಮಾನವಾಗಿ ಶೋಭೆ ನೀಡುತ್ತಿತ್ತು.

ಕೆಲವು ದಿನಗಳ ಬಳಿಕ ಆನಂದರು ನಿವೃತ್ತರಾಗಿ ಮನೆ ಸೇರಿದ್ದರು. ವಿರಾಮದ ಆರಾಮ ಜೀವನ ಸಾಗಿಸತೊಡಗಿದ್ದರು. ಅದೊಂದು ದಿನ... 'ಅಪಘಾತಕ್ಕೆ ತುತ್ತಾದ ಅಬ್ದುಲ್ಲಾ ಇನ್ನಿಲ್ಲ' ಎಂಬ ದಾರುಣ ವಾರ್ತೆ ಬರಸಿಡಿಲಾಗಿ ಎರಗಿತ್ತು. ಸಹೋದ್ಯೋಗಿಯೊಬ್ಬರು ಸುದ್ದಿ ಮುಟ್ಟಿಸಿದ್ದರು.

ಆನಂದರು ತತ್ತರ... ತರತರದ ಉಮ್ಮಳಿಕೆ... ಅಲ್ಲಾ ಹೊಸಬಾಳಿಗೆ ಹೊರಳಿದ್ದಾತನಿಗೆ ವಿಧಿ ಶಾಶ್ವತ ತಡೆ ಹಾಕಿದ್ದರ ಔಚಿತ್ಯವೇನೋ? ಯಾರನ್ನು ಕೇಳಬೇಕು?...

ಅಂದು ಆನಂದರ ಮೊಮ್ಮಗ ಅನೀಶ್ ಏಕೋ ಮುನಿಸಿನ ಮಡಿಲಲ್ಲಿ ಗಟ್ಟಿ ಕೂತುಬಿಟ್ಟಿದ್ದ. ಸಹನಾ ಎತ್ತಿಕೊಂಡು ಸಂತೈಸಲಾಗದ ಒದ್ದಾಡುತ್ತಿದ್ದಾಗ ಲಕ್ಷ್ಮೀದೇವಿ ಬಳಿ ಬಂದರು. ಮಗುವನ್ನು ಎತ್ತಿಕೊಂಡು ಓಡಾಡುತ್ತಾ ಹೊಸ ಆಟಿಗೆ ಎಂಬಂತೆ ವಾಲ್‌ಪ್ಲೇಟ್ ತೋರಿಸಿದರು.

'ನೋಡು ಪುಟ್ಟಾ... ಈಗ ಇಲ್ಲಿ ಜುಳು ಜುಳು ನೀರು ಬೀಳ್ತದೆ... ಹಕ್ಕಿ ಸ್ವರ ಕೇಳ್ತದೆ... ನೋಡುವಾ...'

ಸಂತೈಸುತ್ತ ಲಕ್ಷ್ಮೀದೇವಿ ವಿನೀತ್‌ನೆಡೆಗೆ ಕಣ್ಣು ಹೊರಳಿಸಿದರು. ಅಲ್ಲೇ ಕುಳಿತಿದ್ದ ಇಂಗಿತಜ್ಞ ಮುಗುಳ್ನಗುತ್ತಾ ಎದ್ದು ಸ್ವಿಚ್ಚ್ ಅದಮಿದ.

ಆ ಫ್ರೇಮಿನೊಳಗೆ ಝಗ್ಗನೆ ಧವಳ ಬೆಳಕು ಹರಡಿಕೊಂಡಿತು. ಇಡೀ ನಿಸರ್ಗ ಜೀವ ತಳೆಯಿತು. ಝರಿಯಿಂದ ಅಲೆ ಅಲೆ ನೀರು ಕೆಳಗೆ... ಜುಳು ಜುಳು ಮಂಜುಳ ರವ ಸಹಿತ... ಮರಗಳೆಡೆಯಿಂದ ಹಕ್ಕಿಗಳ ಇಂಚರ... ನೋಟಕರಿಗೆ ತಂಪು ಪರಿಸರದ ಸುರಮ್ಯ ಅನುಭವ.

ಮಗುವಿಗೆ ನಿಬ್ಬೆರಗು, ಮೊಗ ಅರಳಿದ ಹೂವಾಯ್ತು. ಕಂಡ ವಿನೀತ್‌ಗೂ ಹಿಗ್ಗು ಮೇರೆ ಮೀರಿತು.

'ಅಮ್ಮ... ಅಪ್ಪನಿಗೆ ಸಿಕ್ಕಿದ ಸ್ಮರಣಿಕೆ ಕಮ್ ಗಿಫ್ಟ್... ಈಗ ಸಾರ್ಥಕವಾಯ್ತು. ನಮ್ಮ ಅನಿಗೂ ಇಷ್ಟವಾಯ್ತಲ್ಲ?...'

'ಅಪ್ಪ', 'ಸ್ಮರಣಿಕೆ'... ಪದಗಳನ್ನು ಕೇಳಿ ಆಗಷ್ಟೇ ಒಳಬಂದರು. ಆನಂದರು ಅಬ್ದುಲ್ಲನ ನೆನಪುಗಳೆಲ್ಲ ಕಲಕಿಕೊಂಡವು...

'ಹಕ್ಕಿ ಎಲ್ಲಿ? ಕಾಣ್ತಿಲ್ಲ?...' ಅನೀಶನಿಗೆ ಅಚ್ಚರಿ.

'ಹಕ್ಕಿಗಳೆಲ್ಲ ಮರದಲ್ಲಿ ಅಡಗಿ ಕೂತಿವೆ...' ನಸುನಕ್ಕು ಅಂದ ಆನಂದರ ಮುಖ ಗಂಭೀರವಾಯ್ತು. ಮುಂದಿನದು ಸ್ಥಗಿತವಾಗಿತ್ತು.

'ಸ್ಮರಣಿಕೆ ಕೊಟ್ಟವರು ಹಾಗೆಯೇ ಎಲ್ಲೋ...!...'